ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ **16.02.2024**

ಮುಂದುವರೆದ ಪಾಟೀ ಸವಾಲುಃ ಶ್ರೀ ಹೆಚ್ ಇ ಪಿ ವಕೀಲರಿಂದ

ಅರೋಪಿಗಳು ನನ್ನನ್ನು ಸೇರಿಸಿ ಎಲ್ಲಾ ಧರ್ಮದರ್ಶಿಗಳ ವಿರುದ್ಧ ಮಡಿಕೇರಿ ನ್ಯಾಯಲಯದಲ್ಲಿ ಈ ಹಿಂದೆ ಸಿವಿಲ್ ದಾವೆ ಓ ಎಸ್ 68/2009 ರಂತೆ ಪ್ರಕರಣ ದಾಖಲಿಸಿದರು ಎಂದರೆ ನನಗೆ ನೆನಪಿಲ್ಲ. ಮಡಿಕೇರಿಯ ಬಿ ಎಸ್ ರುದ್ರಪ್ರಸನ್ನ ವಕೀಲರು ನನಗೆ ಪರಿಚಯ ಇಲ್ಲ ನಾನು ಮಡಿಕೇರಿ ನ್ಯಾಯಾಲಯಕ್ಕೆ ಹೋಗಿರುವುದಿಲ್ಲ. ಸದರಿ ಪ್ರಕರಣದಲ್ಲಿ ನನಗೆ ನೋಟಿಸ್ಸು ಜಾರಿಯಾಗಿರುವುದಿಲ್ಲ. ಸದರಿ ಪ್ರಕರಣದಲ್ಲಿ ನಾನು ಚಾಸಾ-11 ಮತ್ತು ಚಾಸಾ-7 ವಕೀಲರ ಮೂಲಕ ಹಾಜರಾಗಿ ಪ್ರತಿವಾದ ಪತ್ರ ಸಲ್ಲಿಸಿದ್ದೆವು ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಚಾಸಾ-1 ಚಾಸಾ-10 ಚಾಸಾ-8 ಚಾಸಾ-12 ಚಾಸಾ-13 ಮತ್ತು 14 ರವರು ಟ್ರಸ್ಟ ನ ಹಿತಾದೃಷ್ಟಿ ಗೆ ಮಾರಕವಾಗಿ ಬೈಲಾಗಳಿಗೆ ವಿರುದ್ಧ ವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಯವರು ಅರೋಪಿಗಳನ್ನು ಕಾನೂನು ಬಾಹಿರವಾಗಿ ಟ್ರಸ್ಟಿ ನಿಂದ ಹೊರ ಹಾಕಲು ಪ್ರಯತ್ನಿಸುತಿದ್ದಾರೆ ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಅರೋಪಿಗಳು ಸ್ಥಾಪಕ ದರ್ಮದರ್ಶಿಗಳಾಗಿದ್ದು ಉಳಿದ ಎಲ್ಲಾ ದರ್ಮದರ್ಶಿಗಳಂತೆ ಅವರಿಗೆ ಎಲ್ಲಾ ಹಕ್ಕು ಇದೆ ಎಂದು ಹಾಗೂ ಚಟುವಟಿಕೆಗಳಲ್ಲಿ ಬಾಗಿಯಾಗಲು ಅವರಿಗೆ ಹಕ್ಕು ಇದೆ ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಅರೊಪಿಗಳನ್ನು ಯಾವ ದಿನಾಂಕದಂದು ವಜಾ ಮಾಡಲಾಗಿತ್ತು ಎಂದು ಈಗ ನನಗೆ ನೆನಪಿಲ್ಲ. ಅರೋಪಿಗಳನ್ನು ಚಾಸಾ-16 ರವರ ಲೆಕ್ಕಪರಿಶೋಧನಾ ವರದಿಯ ಮೇಲೆ ಅಮಾನತ್ತು ಮಾಡಲಾಗಿದೆ. ನಿಪಿ-13 ಯಾವ ದಾಖಲೆ ಮತ್ತು ಅದನ್ನು ಯಾರು ಮತ್ತು ಯಾವ ಕಾರಣಕ್ಕಾಗಿ ತಯಾರಿಸಲಾಗಿದೆ ಎಂದು ಹೇಳಲು ಬರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ವಯಕ್ತಿಕ ಮಾಹಿತಿ ಇಲ್ಲ. ಅರೋಪಿಗಳು ಹಣ ದುರುಪಯೋಗ ಮಾಡಿಕೊಂಡಿದ್ದಾರೆಂದು ಅಧ್ಯಕ್ಷರು ಮತ್ತು

ಕಾರ್ಯದರ್ಶಿ ಗಳ ಮೂಲಕ ತಿಳಿದುಕೊಂಡಿರುತ್ತೇನೆ. ಸದರಿ ಸಮಯದಲ್ಲಿ ಚಾಸಾ-10 ರವರು ಅಧ್ಯಕ್ಷ ರಾಗಿದ್ದು ಚಾಸಾ-1 ರವರು ಕಾರ್ಯದರ್ಶಿ ಗಳಾಗಿದ್ದರು. ಈ ಪ್ರಕರಣಕ್ಕೆ ಸಂಬಂದಿಸಿದಂತೆ ಯಾವುದೇ ದಾಖಲೆಗಳನ್ನು ನಾನು ವಯಕ್ತಿಕವಾಗಿ ಪರಿಶೀಲನೆ ಮಾಡಿರುವುದಿಲ್ಲ. ಅಂದಿನ ಅಧ್ಯಕ್ಷರಾದ ಚಾಸಾ-10 ಕಾರ್ಯದರ್ಶಿ ಗಳು ಹಾಗೂ ಖಜಾಂಚಿಗಳು ತಿಳಿಸಿದ ಮಾಹಿತಿ ಹೊರತುಪಡಿಸಿ ಬೇರೆ ಏನು ನನಗೆ ಗೊತ್ತಿಲ್ಲ. 2 ಮತ್ತು 3 ಅರೋಪಿ ನಮ್ಮ ಟ್ರಸ್ಟ ಪ್ರಾರಂಭ ಅದಾಗಿನಿಂದ 23.04.2006 ರವರೆಗೆ ಯಾವುದೇ ಹುದ್ದೆಯನ್ನು ಅಲಂಕರಿಸಿರುವುದಿಲ್ಲ ಎಂದರೆ ಸರಿ. ಅರೋಪಿಗಳ ಅಧಿಕಾರವಾದಿಯಲ್ಲಿ ಧರ್ಮದರ್ಶಿಗಳು ದೇಣಿಗೆ ನೀಡಿರುವ ಬಗ್ಗೆ ನನಗೆ ನೆನಪಿಲ್ಲ. ಅದ್ದರಿಂದ ಅರೋಪಿಗಳು ಲೆಕ್ಕ ಕೊಡುತ್ತೇವೆ ಎಂದು ಹೇಳಿ 1 ನೇ ಅರೋಪಿಯನ್ನು ಸಮರ್ಥಸಿಸುವ ಪ್ರಮೇಯ ಇರಲಿಲ್ಲ ಎಂದರೆ ಸರಿಯಲ್ಲ.

ವೀರಭೂಮಿ ರೇಸಾರ್ಟ್ ನಲ್ಲಿ ಸಭೆ ನಡೆದಿದ್ದು ಯಾವ ಕಾರಣಕ್ಕೆ ಎಂದು ನನಗೆ ನೆನಪಿಲ್ಲ. ಸದರಿ ಸಭೆಯಲ್ಲಿ ಏನು ಚರ್ಚೆ ಯಾಗಿದೆ ಮತ್ತು ನಡಾವಳಿಯನ್ನು ಏನು ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ನಡಾವಳಿಯ ಸಹಿ ಹಾಕಿರುವ ಬಗ್ಗೆ ನನಗೆ ನೆನಪಿಲ್ಲ. ವೀರಭೂಮಿ ರೇಸಾರ್ಟ್ ನಲ್ಲಿ ಸಭೆ ನಡೆದಿರುವುದನ್ನು ತನಿಖಾಧಿಕಾರಿಗಳಿಗೆ ತಿಳಿಸಿರುವುದಿಲ್ಲ. ಏಪ್ರಿಲ್ 2006 ಚಾಸಾ-7 ರ ಮನೆಯಲ್ಲಿ ಸಭೆ ಸೇರಿದ್ದು ಅ ಬಗ್ಗೆ ನಡವಳಿ ಮಾಡಿರುವ ಬಗ್ಗೆ ನನಗೆ ನೆನಪಿಲ್ಲ. ಯಾವುದೇ ಸಭೆಯು ಅಧ್ಯಕ್ಷರ ಅಪ್ಪಣೆ ಇಲ್ಲದೆ ಮಾಡಲು ಸಾಧ್ಯವಿಲ್ಲ ಎಂದೆ ಸರಿ. ಏಪ್ರಿಲ್ 2006 ರಲ್ಲಿ 1 ನೇ ಅರೋಪಿ ಅಧ್ಯಕ್ಷ ರಾಗಿದ್ದರು ಎಂದರೆ ಸರಿ.ಸುದೀರ್ ಹಾಗೂ ನಿಂಗಪ್ಪನವರು ಖಜಾಂಚಿಯಾಗಿದ್ದರು ಎಂದರೆ ನನಗೆ ನೆನಪಿಲ್ಲ. ಚಾಸಾ-7 ರವರ ಮನೆಯಲ್ಲಿ ಸಭೆ ನಡೆದಿದ್ದು ಅರೋಪಿಗಳು 6 ತಿಂಗಳುಗಳ ಕಾಲಕಾವಕಾಶ ಕೇಳಿರುವ ಬಗ್ಗೆ ತನಿಖಾಧಿಕಾರಿಗಳಿಗೆ ಯಾವುದೇ ದಾಖಲೆಗಳನ್ನು ನೀಡಿರುವುದಿಲ್ಲ.

ಯಾವುದೇ ಸಭೆ ನಡೆಯದ ಕಾರಣ ಅ ಸಂಬಂದ ದಾಖಲೆಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಸಾಕ್ಷಿಗೆ ಓ ಎಸ್ 68/2009 ರ ಪ್ರತಿವಾದ ಪತ್ರದ ದೃಢೀಕೃತ ನಕಲನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ಸಹಿಯನ್ನು ಒಪ್ಪಿದ ಮೇರೆಗೆ ಸದರಿ ದಾಖಲೆಯನ್ನು ನಿಡಿ- 15 ಎಂದು ಗುರುತಿಸಲಾಯಿತು. ನಾನು ಚಾಸಾ-7 ಮತ್ತು 11 ರವರು ಸದರಿ ಪ್ರಕರಣದಲ್ಲಿ ಹಾಜರಾಗಿ ಪ್ರತಿವಾದ ಪತ್ರವನ್ನು ಹಾಜರುಪಡಿಸಿದ್ದು ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ನನಗೆ ನೆನಪಿಲ್ಲ.

ದಿಃ 31.03.2002 ರಂದು ನನ್ನಿಂದ 3 ಲಕ್ಷ ಹಣ ದೇಣಿಗೆಯಾಗಿ ಹಣ ಪಡೆಯಲಾಗಿದೆ ಎಂದರೆ ಸರಿ. ಸಾಕ್ಷಿ ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ- 16 ಎಂದು ಗುರುತಿಸಲಾಯಿತು. ಟ್ರಸ್ಟ ಸ್ಥಾಪನೆಯಾದ ದರ್ಮದರ್ಶಿ ಗಳ ದೇಣಿಗೆ ಬಿಟ್ಟು ಬೇರೆ ಯಾವುದೆ ಅದಾಯ ಇರಲಿಲ್ಲ ಎಂದರೆ ಸರಿ. ನಿಡಿ-1 ರಿಂದ 5 ಮತ್ತು 16 ಸರಿ ಇರತ್ತದೆ. ನಿಡಿ-16 ರಲ್ಲಿ 1 ಲಕ್ಷ ಜಾಗ ಖರೀದಿ ಮಾಡಲು ತೋರಿಸಿದ್ದು ಸದರಿ ಜಾಗವು ಶಾಲಾ ಜಾಗವಾಗಿರುತ್ತದೆ. ಸದರಿ ಜಾಗವನ್ನು ಚಾಸಾ-8 ರವರ ಹೆಸರಿನಲ್ಲಿ ಖರೀದಿ ಮಾಡಲಾಗಿದೆ. ಟ್ರಸ್ಟ ಪ್ರಾರಂಭವಾದಗಿನಿಂದ 1 ನೇ ಅರೋಪಿಯ ಅಧಿಕಾರ ಅವದಿ ಮುಗಿಯುವವರೆಗೆ ಶಾಲಾ ಕಟ್ಟಡ ಹಾಸ್ಟೆಲ್ ಗೆಸ್ಟ ಹೌಸ್ ಕಾಂಪೌಂಡ್ ಕಾಮಾಗಾಗಿ ಮುಕ್ತಾಯ ವಾಗಿತ್ತು ಎಂದರೆ ಸರಿ. ದಿಃ 10.04.2007 ಕ್ಕೆ ತೇಜಸ್ ಅಸೂಸ್ಸಿಯನ್ ಕಡೆಯಿಂದ ಮೌಲ್ಯ ದೃಢೀಕರಣ ಪತ್ರವನ್ನು ಪಡೆಯಲಾಗಿತ್ತು ಎಂದರೆ ಸರಿ. ಸದರಿ ಸಮಯದಲ್ಲಿ ಚಾಸಾ- 10 ರವರು ಅಧ್ಯಕ್ಷ ರಾಗಿದ್ದರು ಎಂದರೆ ಸರಿ.

ದಿಃ 25.04.2008 ರಂದು ಪಿ ಎಸ್ ದೇವಯ್ಯನವರನ್ನು ಮರುಚೊಡಣೆಯಿಂದ ದರ್ಮದರ್ಶಿ ಗಳಾಗಿ ಸೇರ್ಪಡೆ ಮಾಡಲಾಗಿದೆ ಎಂದರೆ ಸರಿ. 1 ನೇ ಅರೋಪಿಯ ಅಧ್ಯಕ್ಷ

ಅವದಿಯಲ್ಲಿ ಯಾವುದೇ ಬ್ಯಾಂಕಿ ನಿಂದ ಸಾಲ ಪಡೆದಿರುವುದಿಲ್ಲ ಎಂದರೆ ನನಗೆ ನೆನಪಿಲ್ಲ. ಸದರಿ ಮರುಚೋಡಣಾ ಪತ್ರದಲ್ಲಿ ಕಾರ್ಪೋರೇಷನ್ ಬ್ಯಾಂಕಿನಿಂದ ಪಡೆದ ಸಾಲ

ಸುಸ್ತಿಯಾಗಿದ್ದು ಟ್ರಸ್ಟ ಅರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿದ್ದ ಕಾಲಕ್ಕೆ ಪಿ ಎಸ್ ದೇವಯ್ಯನವರು ದರ್ಮದರ್ಶಿಗಳನಾಗಿ ಸೇರಿಸಿಕೊಳ್ಳಲಾಗಿತ್ತು ಎಂದರೆ ಸರಿಯಲ್ಲ. ನಿಪಿ- 8 ನ್ನು ತಯಾರು ಮಾಡುವ ಸಮಯದಲ್ಲಿ ಯಾವುದೇ ದಾಖಲೆಗಳನ್ನು ಪರಿಶೀಲನೆ ಮಾಡಿರುವುದಿಲ್ಲ. ನಿಪಿ-8 ಹಾಗೂ ನಿಡಿ-16 ಒಂದಕ್ಕೊಂದು ತಾಳೆಯಾಗುತ್ತದೆ ಎಂದರೆ ಸರಿ. ನಿಪಿ-8 ಚಾಸಾ-10 ರವರು ಕೈಬರವಣಿಗೆಯುಲ್ಲಿ ತಯಾರಿಸಲಾಗಿದ್ದು ಒಂದೇ ಪ್ರತಿಯಲ್ಲಿ ತಯಾರಿಸಲಾಗಿದೆ. ನಿಡಿ-8 ರಲ್ಲಿ ದೇಣಿಗೆ ಹಣವನ್ನು ಯಾರು ಯಾರಿಗೆ ಪಾವಾತಿಸಿದ್ದಾರೆ ಎಂದು ನಮೂದಿಸಿಲ್ಲ ಎಂದರೆ ಸರಿ. ದಿಃ 28.03.2004 ನಾನು ರಾಜೀನಾಮೆ ನೀಡಿ ದಿಃ 05.10.2006 ರಂದು ಮರು ಸೆರ್ಪಡೆ ಮಧ್ಯದಲ್ಲಿ ಏನು ವ್ಯವಹಾರ ಅಗಿದೆ ಎಂದು ನನಗೆ ನೆನಪಿಲ್ಲ. ನಿಪಿ-13 ನ್ನು ಯಾವ ದಾಖಲೆಗಳ ಅಧಾರದ ಮೇಲೆ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ಪರದರ್ಶಕವಾಗಿ ಶಾಲೆಯ ಲೆಕ್ಕಪತ್ರಗಳನ್ನು ಪರಿಶೀಲಿಸಿದರೆ ಹಣ ದುರುಪಯೋಗದ ಬಗ್ಗೆ ತಿಳಿದು ಬರುತ್ತದೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದಂದತೆ ಅರೋಪಿಗಳನ್ನು ವಜಾ ಮಾಡುವಂತೆ ಸಭೆ ಸೇರಿ ನಡವಳಿ ಕೈ ಗೊಂಡ ಬಗ್ಗೆ ನನಗೆ ನೆನಪಿಲ್ಲ. ವಾಸ್ತವವಾಗಿ ಯಾವುದೇ ಸಭೆ ಮಾಡಿಲ್ಲ ಹಾಗೂ ಯಾವುದೇ ನಡವಳಿ ಕೈಗೊಂಡಿಲ್ಲ ಎಂದರೆ ಸರಿಯಲ್ಲ ಅದೇ ರೀತಿ ಅರೋಪಿಗಳು ವಜಾ ಅಗಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ದೂರನ್ನು ಯಾರು ದಾಖಲಿಸಿದಾರೆಂದು ನನಗೆ ನೆನಪಿಲ್ಲ. ಈ ಪ್ರಕರಣ ದಾಖಲಿಸುವ ಮೊದಲು ಸಭೆ ಸೇರಿ ತಿರ್ಮಾನ ಕೈಗೊಂಡ ಬಗ್ಗೆ ನನಗೆ ನೆನಪಿಲ್ಲ. ನಿಪಿ-8 ನ್ನು ಅರೋಪಿಗಳು ತಯಾರು ಮಾಡಿಲ್ಲ ಬೆಂಗಳೂರಿನಲ್ಲಿ ಯಾವುದೇ ಸಭೆ ಸೇರಿಲ್ಲ ಎಂದರೆ ಸರಿಯಲ್ಲ. ಓ ಎಸ್ 68/2009 ರಲ್ಲಿ ಎಲ್ಲಾ ನಿಜಾಂಶವನ್ನು ಲಿಖಿತ ಹೇಳಿಕೆಯ ಮೂಖಾಂತರ ತಿಳಿದ್ದು ಉಳಿದ ದರ್ಮದರ್ಶಿಗಳಿಗೆ ಹೆದರಿಕೊಂಡು ನ್ಯಾಯಲಾಯದ ಮುಂದೆ ಸುಳ್ಳು

ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ರಿಂದ 3 ನೇ ಆರೋಪಿಗಳು ಯಾವುದೇ ಹಣ ದುರುಪಯೋಗ ಪಡಿಸಿಕೊಂಡಿಲ್ಲ ನಾನು ಹೇಳಿದಂದತೆ ಯಾವುದೇ ಹಣ ವ್ಯತ್ಯಾಸ ಕಂಡು ಬರುತ್ತಿಲ್ಲ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

sd

ಪ್ರ ದ ನ್ಯಾ ದಂ, ಕುಶಾಲನಗರ

CC No. 1157/2010
PW-7